ಇಲಾಖೆ / ವಿಷಯ : DEPARTMENT / SUBJECT: [illegible]

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡ ಪ್ರಭ ದಿನಾಂಕ : DATE : 10|1|2020

ಬೇಟೆ ಬಲೆಗೆ ಎಸ್‌ಐಟಿಯಿಂದ ಮಹಾರಾಷ್ಟ್ರದ ರಿಷಿಕೇಶ್ ದೇವ್ಡೇಕರ್ ಬಂಧನ

# ಗೌರಿ ಹತ್ಯೆ: ಜಾರ್ಖಂಡಲಿ ಆರೋಪಿ ಸೆರೆ

ಕ. ಪ್ರ. 10-1-2020

## ಎರಡೂವರೆ ವರ್ಷದ ಹುಡುಕಾಟದ ನಂತರ ಪೊಲೀಸರಿಗೆ ಸಿಕ್ಕಿಬಿದ್ದ ಆರೋಪಿ



- ಪ್ರಮುಖ ಆರೋಪಿ ಮಹಾರಾಷ್ಟ್ರದ ಅಮೋಲ್ ಕಾಳೆ ಡೈರಿಯಲ್ಲಿ ಈತನ ಹೆಸರಿತ್ತು
- ಪಿಸ್ತೂಲ್ ನಾಶಪಡಿಸಿದ್ದ, ತಲೆಮರೆಸಿಕೊಂಡಿದ್ದ
- ಶುಕ್ರವಾರ ನ್ಯಾಯಾಲಯದ ಮುಂದೆ ಹಾಜರು ಪಡಿಸಿ, ಪೊಲೀಸರ ವಶಕ್ಕೆ ಪಡೆಯುವ ಸಂಭವ



• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಹಿರಿಯ ಪತ್ರಕರ್ತೆ ಗೌರಿ ಲಂಕೇಶ್ ಹತ್ಯೆ ಪ್ರಕರಣದ ಸಂಬಂಧ ಮತ್ತೊಬ್ಬ ಪ್ರಮುಖ ಆರೋಪಿಯನ್ನು ಜಾರ್ಖಂಡ್‌ನಲ್ಲಿ ಕರ್ನಾಟಕದ ಎಸ್‌ಐಟಿ ಪೊಲೀಸರು ಗುರುವಾರ ಬಂಧಿಸಿದ್ದಾರೆ.

ಮಹಾರಾಷ್ಟ್ರದ ರಿಷಿಕೇಶ್ ದೇವ್ಡೇಕರ್ ಅಲಿಯಾಸ್ ಮುರಳಿ (44) ಬಂಧಿತನಾಗಿದ್ದು, ಗೌರಿ ಹತ್ಯೆಯಲ್ಲಿ ಬಳಸಲಾಗಿದ್ದ ಪಿಸ್ತೂಲ್ ನಾಶಗೊಳಿಸುವಲ್ಲಿ ಈತ ಪ್ರಮುಖ ಪಾತ್ರ ವಹಿಸಿದ್ದ. ಈ ಕೃತ್ಯ ಬೆಳಕಿಗೆ ಬಂದ ನಂತರ ತಲೆಮರೆಸಿಕೊಂಡು ಓಡಾಡುತ್ತಿದ್ದ ಆರೋಪಿ ಕೊನೆಗೆ ಎಸ್‌ಐಟಿಗೆ ಸಿಕ್ಕಿಬಿದ್ದಿದ್ದಾನೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಜಾರ್ಖಂಡ್ ರಾಜ್ಯದ ಧನಬಾದ್ ಜಿಲ್ಲೆಯ ಕತ್ರಾಸ್‌ನಲ್ಲಿ ಮುರಳಿ ಇರುವ ಬಗ್ಗೆ ಖಚಿತ ಮಾಹಿತಿ ಪಡೆದ ಪೊಲೀಸರು, ಸಂಜೆ ಆತನನ್ನು ಬಂಧಿಸಿದ್ದಾರೆ. ಬಳಿಕ ಆತ ನೆಲೆಸಿದ್ದ ಮನೆಯಲ್ಲಿ ಸಹ ಪರಿಶೀಲನೆ ನಡೆಸಲಾಯಿತು. ಶುಕ್ರವಾರ ನ್ಯಾಯಾಲಯದ ಮುಂದೆ ಹಾಜರುಪಡಿಸಿ ಹೆಚ್ಚಿನ ವಿಚಾರಣೆಗೆ ವಶಕ್ಕೆ ಪಡೆಯಲಿದ್ದಾರೆಂದು ಅಧಿಕಾರಿಗಳು ಹೇಳಿದ್ದಾರೆ.

ಸೈದ್ಧಾಂತಿಕ ಭಿನ್ನಾಭಿಪ್ರಾಯದ ಹಿನ್ನೆಲೆಯಲ್ಲಿ ಮಹಾರಾಷ್ಟ್ರ ಹಾಗೂ ಕರ್ನಾಟಕದಲ್ಲಿ ನಡೆದಿದ್ದ ವಿಚಾರವಾದಿಗಳ ಹತ್ಯೆ ಸರಣಿ ಸಂಚಿನಲ್ಲಿ ಮುರಳಿ ಪಾತ್ರ ವಹಿಸಿದ್ದಾನೆ. ಈ ಕೊಲೆ ಕೃತ್ಯಗಳಲ್ಲಿ ಮಹಾರಾಷ್ಟ್ರದ ಅಮೋಲ್ ಕಾಳೆ ಹಾಗೂ ಆತನ ಸಹಚರರು ಸೆರೆಯಾದ ನಂತರ ಮುರಳಿ ಅಜ್ಞಾತವಾಗಿದ್ದ. ಇನ್ನು ಗೌರಿ ಹತ್ಯೆಯಲ್ಲಿ ಮುರಳಿ ಭಾಗವಹಿಸಿದ್ದ ಬಗ್ಗೆ ಕಾಳೆ ಡೈರಿಯಲ್ಲಿ ಸುಳಿವು ಸಿಕ್ಕಿತ್ತು. ಎರಡೂವರೆ ವರ್ಷ ಸತತವಾಗಿ ಮುರಳಿಯ ಬೆನ್ನುಹತ್ತಿದ್ದ ಎಸ್‌ಐಟಿ ಅಧಿಕಾರಿಗಳು, ಕೊನೆಗೆ ಆತನನ್ನು ಬಂಧಿಸುವಲ್ಲಿ ಯಶಸ್ಸು ಕಂಡಿದ್ದಾರೆ. ಅಲ್ಲದೆ ಬಲಪಂಥೀಯ ವಿಚಾರಧಾರೆಗಳ ವಿರೋಧಿಗಳ ಹತ್ಯೆಗೆ ಸಜ್ಜಾಗಿದ್ದ ತಂಡದ ಸಂಘಟನೆಯಲ್ಲೂ ಕೂಡಾ ಮುರಳಿ ಕೆಲಸ ಮಾಡಿದ್ದ. ಹಾಗೆಯೇ ತಮ್ಮ ಸಂಘಟನೆಗೆ ನೇಮಕಗೊಂಡ ಸದಸ್ಯರಿಗೆ ಶಸ್ತ್ರಾಸ್ತ್ರ ತರಬೇತಿ, ಆರ್ಥಿಕ ನೆರವು ಹಾಗೂ ವಸತಿ ಸೌಲಭ್ಯ ಕಲ್ಪಿಸುವಲ್ಲಿ ಆತ ಶ್ರಮಿಸಿದ್ದ. ಕಾಳೆಗ್ಯಾಂಗ್ ಸೆರೆಯಾದ ವಿಚಾರ ತಿಳಿದ ಮುರಳಿ, ಉತ್ತರಭಾರತದ ಕಡೆಗೆ ತಲೆಮರೆಸಿಕೊಂಡು ಓಡಾಡುತ್ತಿದ್ದ. ಪೊಲೀಸರ ಬಂಧನ ಭೀತಿಯಿಂದ ಆತ ಒಂದು ಕಡೆ ನೆಲೆ ನಿಲ್ಲದೆ ಹಲವು ರಾಜ್ಯಗಳನ್ನು ಸುತ್ತಾಡಿದ್ದ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

6